## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 2422 |
| ಸದಸ್ಯರ ಹೆಸರು | ಶ್ರೀಮತಿ ಎಸ್.ವೀಣಾ ಅಚ್ಚಯ್ಯ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 22.03.2022 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯಲ್ಲಿ ಬೇಡಿಕೆಗನುಗುಣವಾಗಿ ಮರಳು ದೊರೆಯದೆ, ನಿರ್ಮಾಣ ಕಾಮಗಾರಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | • ಕೊಡಗು ಜಿಲ್ಲೆಯಲ್ಲಿ ಟೆಂಡರ್-ಕಂ-ಹರಾಜು ಮೂಲಕ ನದಿ ಪಾತ್ರದ 17 ಮರಳು ಬ್ಲಾಕ್‌ಗಳಿಗೆ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದ್ದು, ಸದರಿ ಗುತ್ತಿಗೆ ಪ್ರದೇಶಗಳಿಂದ ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಕೆಯಾಗುತ್ತಿರುತ್ತದೆ.<br>• ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ 05 ಕ್ರಷರ್ ಘಟಕಗಳಲ್ಲಿ ಎಂ-ಸ್ಯಾಂಡ್‌ನ್ನು ಉತ್ಪಾದಿಸಿ, ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲಾಗುತ್ತಿದೆ.<br>• ಅಲ್ಲದೆ, ಕೊಡಗು ಜಿಲ್ಲೆಗೆ ನೆರೆಯ ಹಾಸನ, ಮೈಸೂರು, ಮಂಡ್ಯ ಮತ್ತು ಇತರೆ ಜಿಲ್ಲೆಗಳಿಂದ ಎಂ-ಸ್ಯಾಂಡ್ ಪೂರೈಕೆ ಯಾಗುತ್ತಿರುತ್ತದೆ.<br><br>ಮೇಲ್ಕಂಡಂತೆ, ಕೊಡಗು ಜಿಲ್ಲೆಗೆ ಬೇಡಿಕೆಗನುಸಾರ ಮರಳು ಪೂರೈಕೆ ಯಾಗುತ್ತಿರುವುದರಿಂದ ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ನಿರ್ಮಾಣ ಕಾಮಗಾರಿಗಳಿಗೆ ಮರಳಿನ ಕೊರತೆ ಉಂಟಾಗಿರುವುದು ಕಂಡು ಬಂದಿರುವುದಿಲ್ಲ. |
| ಆ. | ಬಂದಿದ್ದಲ್ಲಿ, ಕೊಡಗು ಜಿಲ್ಲೆಯಲ್ಲಿ ನಿರ್ಮಾಣ ಕಾಮಗಾರಿಗಳಿಗೆ ಬೇಡಿಕೆಗನು ಗುಣವಾಗಿ ಮರಳು ಪೂರೈಕೆ ಯಾಗುವಂತೆ ಮಾಡಲು ಇದುವರೆಗೆ ಸರ್ಕಾರ ಕೈಗೊಂಡ ಕ್ರಮವೇನು; | ಕೊಡಗು ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ನಿರ್ಮಾಣ ಕಾಮಗಾರಿಗಳಿಗೆ ಬೇಡಿಕೆಗನುಸಾರ ಮರಳು ಪೂರೈಕೆ ಯಾಗುತ್ತಿರುತ್ತದೆ.<br>ಆದ್ದರಿಂದ, ಕೊಡಗು ಜಿಲ್ಲಾ ವ್ಯಾಪ್ತಿಯ ಸಾರ್ವಜನಿಕ ಹಾಗೂ ಸರ್ಕಾರಿ ನಿರ್ಮಾಣ ಕಾಮಗಾರಿಗಳಿಗೆ ಮರಳು ಕೊರತೆಯ ಪ್ರಶ್ನೆ ಉದ್ಭವಿಸುವುದಿಲ್ಲ. |

| | | |
|---|---|---|
| ಇ) | ಕೊಡಗು ಜಿಲ್ಲೆಯಲ್ಲಿ ಬೇಡಿಕೆಗನುಗುಣವಾಗಿ ಮರಳು ಪೂರೈಕೆಯಾಗದೇ ಅಭಾವ ಕಂಡುಬಂದಿದ್ದಲ್ಲಿ, ಹೊಳೆಯಿಂದ ಮರಳು ತೆಗೆದು ನಿರ್ಮಾಣ ಕಾಮಗಾರಿಗಳಿಗೆ ದೊರೆಯುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು; | ಕೊಡಗು ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ನಿರ್ಮಾಣ ಕಾಮಗಾರಿಗಳಿಗೆ ಬೇಡಿಕೆಗನುಸಾರ ಮರಳು ಪೂರೈಕೆಯಾಗುತ್ತಿರುವುದರಿಂದ ಮರಳು ಕೊರತೆಯ ಪ್ರಶ್ನೆ ಉದ್ಭವಿಸುವುದಿಲ್ಲ.<br><br>ಆದಾಗ್ಯೂ, ಹೊಸ ಮರಳು ನೀತಿ, 2020 ರಂತೆ I, II ಮತ್ತು III ನೇ ಶ್ರೇಣಿಯ ಹಳ್ಳಗಳ ಪಾತ್ರಗಳಲ್ಲಿ ಪ್ರಾಥಮಿಕ ಹಂತದಲ್ಲಿ 08 ಮರಳು ನಿಕ್ಷೇಪ ಪ್ರದೇಶಗಳನ್ನು ಗುರುತಿಸಲಾಗಿರುತ್ತದೆ.<br><br>ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>ಗುರುತಿಸಿರುವ ಮರಳು ನಿಕ್ಷೇಪ ಪ್ರದೇಶಗಳಿಗೆ ಜಿಲ್ಲಾ ಮರಳು ಸಮಿತಿಯಿಂದ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಗೆ ಅಧಿಸೂಚನೆ ಹೊರಡಿಸಿದ ನಂತರ ಸದರಿ ಮರಳು ನಿಕ್ಷೇಪ ಪ್ರದೇಶಗಳಿಂದ ಸ್ಥಳೀಯ ಕಾಮಗಾರಿಗಳಿಗೆ ಮರಳು ಪೂರೈಸಲು ಕ್ರಮ ವಹಿಸಲಾಗುವುದು.<br><br>ಮುಂದುವರೆದು, ಹೊಸ ಮರಳು ನೀತಿ, 2020 ರಂತೆ IV, V ಮತ್ತು VII ನೇ ಶ್ರೇಣಿಯಲ್ಲಿ ಲಭ್ಯವಿರುವ 11 ಮರಳು ನಿಕ್ಷೇಪಗಳನ್ನು ಗುರುತಿಸಲಾಗಿದ್ದು, ಸದರಿ ಮರಳು ಬ್ಲಾಕ್ ಗಳನ್ನು ಮೆ\|\| ಕರ್ನಾಟಕ ಸ್ಟೇಟ್ ಮಿನರಲ್ ಕಾರ್ಪೋರೇಷನ್ ಲಿ., ಇವರಿಗೆ ಜಿಲ್ಲಾ ಮರಳು ಸಮಿತಿಯಿಂದ ಹಸ್ತಾಂತರಿಸಲು ತೀರ್ಮಾನಿಸಲಾಗಿದ್ದು, ಕ್ರಮವು ಪ್ರಗತಿ ಹಂತದಲ್ಲಿರುತ್ತದೆ.<br><br>ಮರಳು ಬ್ಲಾಕ್ ಗಳ ವಿವರ ಹಾಗೂ ಜಿಲ್ಲಾ ಮರಳು ಸಮಿತಿ ನಡವಳಿ ಪ್ರತಿಯನ್ನು **ಅನುಬಂಧ-2 ಮತ್ತು 3** ರಲ್ಲಿ ನೀಡಲಾಗಿದೆ. |
| ಈ | ಜಿಲ್ಲೆಯಲ್ಲಿ ಮಳೆಗಾಲ ಪ್ರಾರಂಭವಾದ ಕೂಡಲೇ ಮರಳು ತೆಗೆಯಲು ಸಾಧ್ಯವೇ ಆಗದ ಪರಿಸ್ಥಿತಿ ಇರುವುದರಿಂದ, ಈ ಸಲದ ಬೇಸಿಗೆ ಕಾಲದಲ್ಲೇ ಸಾಕಷ್ಟು ಮರಳು ದಾಸ್ತಾನು ಮಾಡಲು ಇದುವರೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರಲ್ಲಿ ಮರಳು, ಎಂ-ಸ್ಯಾಂಡ್ ಮತ್ತು ಇತರ ಖನಿಜಗಳನ್ನು' ಉತ್ಪಾದನೆ ಮಾಡಿ ಸಂಗ್ರಹಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ ಗುತ್ತಿಗೆದಾರರುಗಳು ಬೇಸಿಗೆ ಕಾಲದಲ್ಲಿ ಮರಳನ್ನು ಸಂಗ್ರಹಿಸಿ ಮಳೆಗಾಲದಲ್ಲಿ ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಕೆ ಮಾಡುತ್ತಿರುತ್ತಾರೆ. |

. . . 3

| | | |
|---|---|---|
| ಉ) | ಕ್ರಮ ಕೈಗೊಂಡಿದ್ದಲ್ಲಿ, ಜಿಲ್ಲೆಯಲ್ಲಿ ಮಳೆಗಾಲದಲ್ಲಿ ನಿರ್ಮಾಣ ಕಾಮಗಾರಿಗಳಿಗೆ ಪೂರೈಕೆ ಮಾಡಲು ಪ್ರಸ್ತುತ ಎಷ್ಟು ಮರಳನ್ನು ಇದುವರೆಗೆ ದಾಸ್ತಾನು ಮಾಡಲಾಗಿದೆ? | ಕೊಡಗು ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಧಾರಾಕಾರವಾದ ಮಳೆಯು ಸುರಿಯುವ ಹಿನ್ನಲೆಯಲ್ಲಿ ನಿರ್ಮಾಣ ಕಾಮಗಾರಿಗಳು ಅತೀ ವಿರಳವಾಗಿರುವುದರಿಂದ ಮರಳಿನ ಬೇಡಿಕೆಯ ಪ್ರಮಾಣವು ಕಡಿಮೆ ಇರುತ್ತದೆ.<br><br>ಒಂದು ವೇಳೆ ಮರಳಿನ ಬೇಡಿಕೆ ಬಂದರೂ ಸಹ ಜಿಲ್ಲಾ ವ್ಯಾಪ್ತಿಯ ನದಿ ಪಾತ್ರಗಳ 17 ಮರಳು ಬ್ಲಾಕ್ ಗಳಲ್ಲಿ ಪರಿಸರ ಅನುಮತಿ ಪತ್ರದಂತೆ 68,650 ಮೆಟ್ರಿಕ್ ಟನ್ ಮರಳನ್ನು ತೆಗೆಯಲು ಅವಕಾಶವಿರುತ್ತದೆ.<br><br>ಪ್ರಸ್ತುತ, ಕೊಡಗು ಜಿಲ್ಲಾ ವ್ಯಾಪ್ತಿಯ ನದಿ ಪಾತ್ರಗಳಲ್ಲಿ ನೀರಿನ ಇಳಿಕೆ ಪ್ರಮಾಣವು ಕಡಿಮೆಯಾಗದಿರುವ ಕಾರಣ ಸದರಿ ಮರಳು ಬ್ಲಾಕ್ ಗಳಲ್ಲಿ ಮರಳು ಗಣಿಗಾರಿಕೆಯನ್ನು ಕೈಗೊಂಡಿರುವುದಿಲ್ಲ.<br><br>ಆದುದರಿಂದ, ಪ್ರಸ್ತುತ ಸ್ಟಾಕ್ ಯಾರ್ಡ್ ನಲ್ಲಿ ಮರಳನ್ನು ಸಂಗ್ರಹಿಸಲು ಸಾಧ್ಯವಾಗಿರುವುದಿಲ್ಲ. ಮುಂದಿನ ದಿನಗಳಲ್ಲಿ ನದಿ ಪಾತ್ರದಲ್ಲಿ ನೀರಿನ ಇಳಿಕೆ ಕಡಿಮೆಯಾದ ನಂತರ ಗುತ್ತಿಗೆದಾರರು ಮರಳು ಬ್ಲಾಕ್ ಗಳಲ್ಲಿ ಮರಳು ಗಣಿಗಾರಿಕೆ ನಡೆಸಿ, ಸ್ಟಾಕ್ ಯಾರ್ಡ್ ಗಳಲ್ಲಿ ಮರಳು ಸಂಗ್ರಹಿಸುವ ಸಾಧ್ಯತೆ ಇರುತ್ತದೆ.<br><br>ಮುಂದುವರೆದು, ಕೊಡಗು ಜಿಲ್ಲೆಯ 05 ಎಂ-ಸ್ಯಾಂಡ್ ಘಟಕಗಳಿಂದ ವಾರ್ಷಿಕ ಅಂದಾಜು 93,000 ಮೆಟ್ರಿಕ್ ಟನ್ ಎಂ-ಸ್ಯಾಂಡ್ ಉತ್ಪಾದನೆ ಮಾಡುವ ಸಾಮರ್ಥ್ಯವಿದ್ದು, ಪ್ರಸ್ತುತ ದಿನಾಂಕ 17.03.2022 ರ ಅಂತ್ಯಕ್ಕೆ ಅಂದಾಜು 9,610 ಮೆಟ್ರಿಕ್ ಟನ್ ನಷ್ಟು ಎಂ-ಸ್ಯಾಂಡ್ ನ್ನು ಗುತ್ತಿಗೆದಾರರು ಸಂಗ್ರಹಿಸಿರುತ್ತಾರೆ.<br><br>ಇನ್ನುಳಿದಂತೆ ಕೊಡಗು ಜಿಲ್ಲೆಗೆ ನೆರೆಯ ಜಿಲ್ಲೆಗಳ ಎಂ-ಸ್ಯಾಂಡ್ ಘಟಕಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಎಂ-ಸ್ಯಾಂಡ್ ಪೂರೈಕೆಯಾಗುತ್ತಿರುತ್ತದೆ. |

ಸಂಖ್ಯೆ ಸಿಐ 146 ಎಂಎಂಎನ್ 2022

Halappa

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

ಅನುಬಂಧ-1

## ಹೊಸ ಮರಳು ನೀತಿ-2020 ರಂತೆ 1ನೇ, 2ನೇ ಮತ್ತು 3ನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ ಲಭ್ಯವಿರುವ ಮರಳು ನಿಕ್ಷೇಪಗಳನ್ನು ಗುರುತಿಸಿ ಸಂಬಂಧಿಸಿದ ಗ್ರಾಮ ಪಂಚಾಯತ್‌ಗಳಿಗೆ ವಹಿಸುವ ಬಗ್ಗೆ.

| ಕ್ರ.ಸಂ | ತಾಲ್ಲೂಕು | ಗ್ರಾಮ | ವಿಸ್ತೀರ್ಣ (ಎಕರೆಗಳಲ್ಲಿ) | ಅಂದಾಜು ಪ್ರಮಾಣ (ಮೆ.ಟನ್) |
|---|---|---|---|---|
| 01 | ಮಡಿಕೇರಿ | ನೇರೆಗುಂಡಿ ಬಲಮುರಿ | 4.90 | 600 |
| 02 | ಸೋಮವಾರಪೇಟೆ | ಬೆಂಬಳ್ಳೂರು (ಬಳಪ) | 3.00 | 700 |
| 03 | | ಮಾದ್ರೆ | 2.50 | 500 |
| 04 | ವಿರಾಜಪೇಟೆ | ಕದನೂರು | 1.30 | 350 |
| 05 | | ಹೆಮ್ಮಾಡು | 1.49 | 200 |
| 06 | | ಬೊಳ್ಳುಮಾಡು | 0.75 | 150 |
| 07 | ಪೊನ್ನಂಪೇಟೆ | ಬಿರುನಾಣಿ (ಹುದಿಕೇರಿ ) | 5.40 | 650 |
| 08 | | ಹೈಸೊಡ್ಲೂರು (ಹುದಿಕೇರಿ) | 2.75 | 400 |
| ಒಟ್ಟು | | | | 3550 |

ಹಿರಿಯ ಭೂವಿಜ್ಞಾನಿ
ಗಣಿ ಮತ್ತು ಭೂವಿಜ್ಞಾನ ಇಲಾಖೆ (ಖನಿಜ)
ಮಡಿಕೇರಿ, ಕೊಡಗು ಜಿಲ್ಲೆ.

ಅನುಬಂಧ-2

## ಹೊಸ ಮರಳು ನೀತಿ 2020 ರಂತೆ IV, V ಮತ್ತು VI ಶ್ರೇಣಿಯಲ್ಲಿ ಲಭ್ಯವಿರುವ ಮರಳು ನಿಕ್ಷೇಪಗಳನ್ನು ಸಾರ್ವಜನಿಕ ಮತ್ತು ಸರ್ಕಾರಿ ಕಾಮಗಾರಿ ನಿರ್ವಹಿಸುವ ಇಲಾಖೆಗಳಿಗೆ ಮೀಸಲಿರಿಸಲು ಬಾಕಿ ಇರುವ ಮರಳು ಬ್ಲಾಕ್‌ಗಳ ವಿವರ

| ಕ್ರಸಂ | ತಾಲ್ಲೂಕು | ಬ್ಲಾಕ್‌ನ ಹೆಸರು | ಸರ್ವೆ ನಂ | ವಿಸ್ತೀರ್ಣ | ಪ್ರಮಾಣ (MT) |
|---|---|---|---|---|---|
| 1 | ಸೋಮವಾರಪೇಟೆ | ಮಲಗನಹಳ್ಳಿ ಬ್ಲಾಕ್-II | 31/1 | 12.00 | 4800 |
| 2 | ಮಡಿಕೇರಿ | ನಾಪೋಕ್ಲು | 42, 43, 44, 45, 152/1 & 137 | 5.20 | 2200 |
| 3 | ಸೋಮವಾರಪೇಟೆ | ಹೊಸಳ್ಳಿ | 39/1, 38, 40/2, 44, 49/1, 49/2, 50/1, 50/2, 51, 52, 53, 62 | 5.00 | 2000 |
| 4 | ವಿರಾಜಪೇಟೆ | ಹಾಲಗುಂದ | 1/3, 4, 5, 70, 71, 73/1, 3 | 6.30 | 2520 |
| 5 | ಕುಶಾಲನಗರ | ಗರಗಂದೂರು | 124, 107, 206, 171, 169, 168 | 8.0 | 3200 |
| 6 | ಪೊನ್ನಂಪೇಟೆ | ಕೊಟ್ಟಗೇರಿ | 24, 25, 25/1 | 7.00 | 2800 |
| 7 | ಕುಶಾಲನಗರ | ಶಿರಂಗಾಲ | 243, 245, 250 | 9.00 | 3600 |
| 8 | ಸೋಮವಾರಪೇಟೆ | ಜಂಬೂರು | 44, 45, 33/1 | 6.20 | 2500 |
| 9 | ಪೊನ್ನಂಪೇಟೆ | ಕೋತೂರು | 36/1, 74/1, 53/3 & 35 | 5.20 | 2120 |
| 10 | ಕುಶಾಲನಗರ | ನೆಲ್ಲಿಹುದಿಕೇರಿ-I | 186, 179, 183, 180 | 7.20 | 2880 |
| 11 | ಮಡಿಕೇರಿ | ಬೇತು | 3, 18/1 | 6.20 | 2600 |
| ಒಟ್ಟು | | | | | **31220** |

ಹಿರಿಯ ಭೂವಿಜ್ಞಾನಿ
ಗಣಿ ಮತ್ತು ಭೂವಿಜ್ಞಾನ ಇಲಾಖೆ (ಖನಿಜ)
ಮಡಿಕೇರಿ, ಕೊಡಗು ಜಿಲ್ಲೆ

ಅನುಬಂಧ - 3

ದಿನಾಂಕ: 25.01.2022 ರಂದು ಅಪರಾಹ್ನ 3.00 ಗಂಟೆಗೆ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮರಳು ಸಮಿತಿ ಸಭೆಯ ನಡವಳಿಗಳು

ಅಧ್ಯಕ್ಷತೆ: ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಮರಳು ಉಸ್ತುವಾರಿ ಸಮಿತಿ
ಕೊಡಗು ಜಿಲ್ಲೆ, ಮಡಿಕೇರಿ.

ಸಭೆಯಲ್ಲಿದ್ದ ಉಪಸ್ಥಿತರು:

1. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ
2. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ.
3. ಉಪ ವಿಭಾಗಾಧಿಕಾರಿಗಳು, ಮಡಿಕೇರಿ ವಿಭಾಗ, ಮಡಿಕೇರಿ
4. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಸಾರಿಗೆ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ. (ಪರವಾಗಿ)
5. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ.
6. ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಮಡಿಕೇರಿ. (ಪರವಾಗಿ)
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಮಡಿಕೇರಿ. (ಪರವಾಗಿ)
8. ತಹಶೀಲ್ದಾರರು, ಮಡಿಕೇರಿ/ಕುಶಾಲನಗರ ತಾಲ್ಲೂಕು, ಕೊಡಗು ಜಿಲ್ಲೆ. (ಪರವಾಗಿ)
9. ಹಿರಿಯ ಭೂವಿಜ್ಞಾನಿ ಹಾಗೂ ಸದಸ್ಯ ಕಾರ್ಯದರ್ಶಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಡಿಕೇರಿ.

------

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆ ಇವರನ್ನು ಹಿರಿಯ ಭೂವಿಜ್ಞಾನಿಯವರು ಸಭೆಗೆ ಸ್ವಾಗತಿಸಿದರು ಹಾಗೂ ಸಭೆಯಲ್ಲಿದ್ದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ನಡೆಸಿಕೊಡುವಂತೆ ಜಿಲ್ಲಾಧಿಕಾರಿಯವರನ್ನು ಕೋರಿದರು.

ಜಿಲ್ಲಾಧಿಕಾರಿಯವರು ಸದರಿ ಸಭೆಯಲ್ಲಿ ಚರ್ಚಿಸಬೇಕಾದ ವಿಷಯವನ್ನು ಮಂಡಿಸಲು ಹಿರಿಯ ಭೂವಿಜ್ಞಾನಿಯವರಿಗೆ ಸೂಚಿಸಿದರು. ನಂತರ ಹಿರಿಯ ಭೂವಿಜ್ಞಾನಿಯವರು ಈ ಕೆಳಕಂಡ ವಿಷಯಗಳನ್ನು ವಿವರಿಸಿದರು.

1. **ರಿಟ್ ಪಿಟಿಷನ್ ಸಂಖ್ಯೆ:6853/2021 ರ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಕ್ರಮವಹಿಸಿರುವ ಬಗ್ಗೆ ಚರ್ಚೆ:**

   ಸದರಿ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇವರು ಅರ್ಜಿದಾರರಿಂದ ಉಲ್ಲೇಖಿತ ಪತ್ರಗಳಲ್ಲಿ ತಿಳಿಸಲಾಗಿರುವ ಗುತ್ತಿಗೆದಾರರು ಈಗಾಗಲೇ ನೋಟೀಸ್ ಜಾರಿ ಮಾಡಿ ಗುತ್ತಿಗೆದಾರರು ಬಾಕಿ ಮೊತ್ತವನ್ನು ಏಕೆ ವಸೂಲಿ ಮಾಡಬಾರದು ಎಂಬ ಬಗ್ಗೆ ಸೂಕ್ತ ಸಮಜಾಯಿಷಿ ನೀಡುವಂತೆ ಕಾರಣ ಕೇಳಿ ನೋಟಿಸ್ ಜಾರಿ (SHOW CAUSE NOTICE) ಮಾಡಿ ಕ್ರಮವಹಿಸುವಂತೆ ಆದೇಶಿಸಲಾಗಿದ್ದು, ಅದರಂತೆ ಎಲ್ಲಾ ಮರಳು ಗುತ್ತಿಗೆದಾರರಿಗೂ ಈಗಾಗಲೇ ಬಾಕಿ ಮೊತ್ತಗಳನ್ನು ಪಾವತಿಸುವಂತೆ ಸದರಿ ಆದೇಶದನ್ವಯ 02 ಬಾರಿ SHOW CAUSE NOTICE ಜಾರಿ ಮಾಡಲಾಗಿರುತ್ತದೆಂದು ಹಿರಿಯ ಭೂವಿಜ್ಞಾನಿಯವರು ಸಭೆಯ ಗಮನಕ್ಕೆ ತಂದರು. ಈ ಸಂಬಂಧ ಜಿಲ್ಲಾಧಿಕಾರಿಗಳು ಯಾವ ಬಾಕಿ ಮೊತ್ತದ ಬಗ್ಗೆ ಎಂದು ವಿಚಾರಿಸಲಾಗಿ ಹಿರಿಯ ಭೂವಿಜ್ಞಾನಿಯವರು ಕೆ.ಎಂ.ಎಂ.ಸಿ.ಆರ್-1994 ರ ತಿದ್ದುಪಡಿ ನಿಯಮ 2016 ರ ನಿಯಮ 31-W (iv) ರಲ್ಲಿ ಗುತ್ತಿಗೆದಾರನು ಪರಿಸರ ವಿಮೋಚನಾ ನಿರ್ದೇಶನದಲ್ಲಿ ನೀಡಿದಂತಹ ವಾರ್ಷಿಕ ಉತ್ಪಾದನಾ ಗರಿಷ್ಠ ಪ್ರಮಾಣದ ಶೇಕಡ 50 ರಷ್ಟನ್ನು ಉತ್ಪಾದಿಸಿ ವಿಲೇವಾರಿ ಮಾಡತಕ್ಕದ್ದು ಮತ್ತು ಒಂದು ವೇಳೆ ಆತನು ಇದನ್ನು ಸಾಧಿಸಲು ವಿಫಲನಾದಲ್ಲಿ, ಆತನು ಸದರಿ ಪರಿಸರ ವಿಮೋಚನಾ ನಿರ್ದೇಶನ ಗಾತ್ರದ ಶೇಕಡ 50 ರಷ್ಟು ಪರವಾನಿಗೆ ನೀಡಿದ ವಾರ್ಷಿಕ ಉತ್ಪಾದನೆ ಹಾಗೂ ಬಟವಾಡೆಗಳ ಅಗತ್ಯಗಳನ್ವಯ ರಾಜಧನ ಹಾಗೂ ಹೆಚ್ಚುವರಿ ನಿಯತಕಾಲಿಕ ಸಂದಾಯವನ್ನು ಮಾಡಲು ಬದ್ಧನಾಗಿರತಕ್ಕದ್ದು ಎಂದು ನಿಯಮವಿರುವ ಮೇರೆಗೆ ಗುತ್ತಿಗೆದಾರರು ಸದರಿ ಮೊತ್ತವನ್ನು ಅವೈಜ್ಞಾನಿಕವಾಗಿ ವಿಧಿಸಲಾಗಿದ್ದು, *2018 ರಲ್ಲಿ ಅತಿವೃಷ್ಟಿ ಹಾಗೂ ಭೂಕುಸಿತ, 2019ರ ಕೋವಿಡ್-19 ಸಂಬಂಧ ರಾಜ್ಯದ್ಯಂತ ಲಾಕ್‌ಡೌನ್* ಆದ ಕಾರಣ ಮರಳು ನಿಯಮಾವಳಿಗಳನ್ವಯ ವಿಲೇವಾರಿ ಮಾಡಲು ಸಾಧ್ಯವಿಲ್ಲ ಹಾಗೂ ಸದರಿ ನೋಟೀಸ್‌ಗೆ ಅವರ ವಿವರಣೆಗಳನ್ನು ಸರ್ಕಾರವು ಮಾನ್ಯ

ಮಾಡಿರುವುದಿಲ್ಲವೆಂದು ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುವ ಗುತ್ತಿಗೆದಾರರನ್ನೊಳಗೊಂಡಂತೆ ಎಲ್ಲಾ ಮರಳು ಗುತ್ತಿಗೆದಾರರಿಗೂ ಮತ್ತೊಮ್ಮೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ **SHOW CAUSE NOTICE** ಜಾರಿ ಮಾಡಲಾಗಿರುತ್ತದೆಂದು ಹಿರಿಯ ಭೂವಿಜ್ಞಾನಿಯವರು ಸಭೆಯ ಗಮನಕ್ಕೆ ತಂದರು.

2. ಉಪ-ಸಮಿತಿ ವರದಿ ಬಗ್ಗೆ ಚರ್ಚೆ:

ಕ್ರಮ ಸಂಖ್ಯೆ:01 ರಲ್ಲಿ ಪ್ರಸ್ತಾಪಿಸಿರುವ ಮೊತ್ತಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ಅವೈಜ್ಞಾನಿಕವಾಗಿ ವಿಧಿಸಿರುತ್ತಾರೆಂದು ಹಾಗೂ ಸದರಿ ಮೊತ್ತವನ್ನು ಕೈಬಿಡಬೇಕೆಂದು ಮರಳು ಗುತ್ತಿಗೆದಾರರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗಿದ್ದ ಮೇರೆಗೆ ದಿನಾಂಕ:07.04.2021 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ನಿರ್ದೇಶನದಂತೆ ಮರಳು ಗುತ್ತಿಗೆದಾರರು ಪರಿಸರ ವಿಮೋಚನಾ ಪತ್ರದಲ್ಲಿ ನಿಗಧಿಪಡಿಸಿರುವ ವಾರ್ಷಿಕ ಉತ್ಪಾದನೆಯ ಕನಿಷ್ಠ 50% ರಷ್ಟು ಉಪಖನಿಜ ಉತ್ಪಾದನೆ ಹಾಗೂ ರವಾನೆ ಮಾಡಿಲ್ಲದ ಗುತ್ತಿಗೆದಾರರಿಂದ ರಾಜಧನ, APP ಹಾಗೂ DMF ಮೊತ್ತಗಳನ್ನು ಪಾವತಿಸುವಲ್ಲಿ ವಿನಾಯಿತಿ ನೀಡುವ ಸಂಬಂಧ **ಉಪ-ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿ ವರದಿಯನ್ನು** ಈಗಾಗಲೇ ದಿನಾಂಕ:20.09.2021 ರಂದು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿರುತ್ತದೆಂದು ಹಿರಿಯ ಭೂವಿಜ್ಞಾನಿಯವರು ಸಭೆಯ ಗಮನಕ್ಕೆ ತಂದರು. ನಂತರ ಜಿಲ್ಲಾಧಿಕಾರಿಗಳು ಈ ಬಗ್ಗೆ ಮಾತನಾಡಿ ಸದರಿ ಸಮಿತಿಯ ವರದಿಯಲ್ಲಿ ಯಾವ ತೀರ್ಮಾನವನ್ನು ನೀಡಲಾಗಿರುತ್ತದೆಂದು ಪ್ರಶ್ನಿಸಿದರು. ಇದಕ್ಕೆ ಹಿರಿಯ ಭೂವಿಜ್ಞಾನಿಯವರು

- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,
- ಗಣಿ ಮತ್ತು ಭೂವಿಜ್ಞಾನ ಇಲಾಖೆ, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,
- ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳನ್ನೊಳಗೊಂಡ **ಉಪ ಸಮಿತಿಯನ್ನು ರಚಿಸಲಾಗಿದ್ದು**, ಸದರಿ ಸಮಿತಿಯು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ವರದಿಯನ್ನು ನೀಡಲಾಗಿರುತ್ತದೆಂದು ಸಭೆಯ ಗಮನಕ್ಕೆ ತಂದರು.

➢ ಕೆ.ಎಂ.ಎಂ.ಸಿ.ಆರ್-**1994** ಹಾಗೂ ತಿದ್ದುಪಡಿ ನಿಯಮ **2016** ರ ನಿಯಮ **31** ಆರ್ **(21)** ರಂತೆ ಮರಳು ಗಣಿಗಾರಿಕೆಯ ಅವಧಿಯು ಗಣಿಗಾರಿಕೆ <u>ರಹಿತ ಅವಧಿಯಾದ ಮಳೆಗಾಲ, ಪ್ರವಾಹ ಅಥವಾ ಇತರೆ ಯಾವುದೇ ನೈಸರ್ಗಿಕ ವಿಕೋಪವನ್ನು</u> ಒಳಗೊಂಡಂತೆ ಐದು ವರ್ಷಗಳ ಅವಧಿಯವರೆಗೆ ಗುತ್ತಿಗೆ ಮಂಜೂರು ಮಾಡಿ ನಿಯಮಾವಳಿಗಳಂತೆ ಕ್ರಮವಹಿಸಲು ಗುತ್ತಿಗೆದಾರರಿಗೆ ಗುತ್ತಿಗೆ ಮಂಜೂರು ಮಾಡಲಾಗಿರುತ್ತದೆ.

➢ ಕೆ.ಎಂ.ಎಂ.ಸಿ.ಆರ್-**1994** ಹಾಗೂ ತಿದ್ದುಪಡಿ ನಿಯಮ **2016** ರ ನಿಯಮ **31** ಡಬ್ಲ್ಯೂ **(IV)** ರಂತೆ ಮರಳು ಗುತ್ತಿಗೆದಾರರು ವಾರ್ಷಿಕ EC ಪ್ರಮಾಣದ ಅರ್ಧದಷ್ಟು ಉಪಖನಿಜ ಉತ್ಪಾದನೆ ಹಾಗೂ ಸಾಗಾಣಿಕೆ ಮಾಡಬೇಕಾಗಿರುತ್ತದೆ. ವಿಫಲವಾದಲ್ಲಿ 50% ಪ್ರಮಾಣಕ್ಕೆ ರಾಜಧನ ಹಾಗೂ AAPP ಮೊತ್ತವನ್ನು ಪಾವತಿಸಬೇಕಾಗಿರುತ್ತದೆ. ಅದರಂತೆ 50% ಮರಳು ಗಣಿಗಾರಿಕೆ ಸಾಗಾಣಿಕೆ ಮಾಡಲು ವಿಫಲವಾದ ಮರಳು ಗುತ್ತಿಗೆದಾರರು. ಅನ್ವಯವಾಗುವ ರಾಜಧನ ಹಾಗೂ AAPP ಮೊತ್ತ ಪಾವತಿಸಲು ಬದ್ಧನಾಗಿರಬೇಕಾಗಿರುತ್ತದೆ ಎಂದು ಇರುವಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ನೋಟೀಸ್ ಜಾರಿ ಮಾಡಿ ಕ್ರಮವಹಿಸಿರುವುದು ಸರಿ ಇರುತ್ತದೆ.

➢ ಕೇಂದ್ರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಆಂತರಿಕ ಆಡಿಟ್ ತಂಡದವರು ದಿನಾಂಕ:17.08.2020 ರಿಂದ 21.08.2020 ರವರೆಗೆ ಆಡಿಟ್ ನಡೆಸಿ, ಮರಳು ಗುತ್ತಿಗೆದಾರರು EC ಪ್ರಮಾಣದ 50% ಉಪಖನಿಜವನ್ನು ಗಣಿಗಾರಿಕೆ/ಸಾಗಾಣಿಕೆ ಮಾಡಬೇಕಾಗಿರುತ್ತದೆ. ವಿಫಲವಾದಲ್ಲಿ 50%

ಪ್ರಮಾಣಕ್ಕೆ ಅನುಗುಣವಾಗಿ ರಾಜಧನ, AAPP ಮತ್ತು ಡಿ.ಎಂ.ಎಫ್ ಮೊತ್ತವನ್ನು ಪಾವತಿಸಬೇಕಾಗಿರುತ್ತದೆಂದು ಆಡಿಟ್ ಕಂಡಿಕೆಯಲ್ಲಿ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುತ್ತಾರೆ. ಅದರಂತೆ 50% ಪ್ರಮಾಣಕ್ಕೆ ಗುತ್ತಿಗೆದಾರರು ಪರವಾನಿಗೆ ಪಡೆಯದೆ ಇರುವವರಿಗೆ ವಿವಿಧ ದಿನಾಂಕಗಳಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ನೋಟೀಸ್ ಜಾರಿ ಮಾಡಲಾಗಿರುತ್ತದೆ. ಹಾಗೂ ಕ್ರಮವೂ ಸರಿ ಇರುತ್ತದೆ.

- ಪರಿಸರ ವಿಮೋಚನಾ ಪತ್ರದಲ್ಲಿನ ಷರತ್ತುಗಳ ನಿರ್ದೇಶನದಂತೆ ಮಳೆಗಾಲದಲ್ಲಿ ಹಾಗೂ ನದಿ ಪಾತ್ರದಲ್ಲಿ ನೀರಿದ್ದರೆ ಮರಳು ಗಣಿಗಾರಿಕೆಗೆ (Instream Quarrying) ನಿರ್ಬಂಧವಿರುತ್ತದೆ.
- ಮರಳು ಗುತ್ತಿಗೆದಾರರು ಸದರಿ ಮೊತ್ತವನ್ನು ಕೈಬಿಡಬೇಕೆಂದು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು, ಇಲ್ಲಿ ರಿಟ್ ಅರ್ಜಿ ಸಂಖ್ಯೆ: 6853/2021 ರಂತೆ ಮನವಿ ಸಲ್ಲಿಸಿದ್ದು, ಸದರಿ ಆದೇಶದಲ್ಲಿ ಅರ್ಜಿದಾರರಿಂದ ಬಾಕಿ ಮೊತ್ತವನ್ನು ಸಂಗ್ರಹಿಸಲು ಈಗಾಗಲೇ ನೋಟೀಸ್ ನೀಡಿರುವ ಬಗ್ಗೆ ಹಾಗೂ ನಿಯಮಾನುಸಾರ ಏಕೆ ಕ್ರಮಕೈಗೊಳ್ಳಬಾರದರ ಕುರಿತು ಸೂಕ್ತ ಸಮಜಾಯಿಷಿ ನೀಡುವಂತೆ <u>ಕಾರಣ ಕೇಳಿ ನೋಟಿಸ್/SHOW CAUSE NOTICE ಜಾರಿ ಮಾಡಿ</u> ಕ್ರಮವಹಿಸಲು ನ್ಯಾಯಾಲಯವು ದಿನಾಂಕ:15.04.2021 ರಲ್ಲಿ ಆದೇಶಿಸಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಮಾಹಿತಿಗಳನ್ನು ಪರಿಶೀಲಿಸಲಾಗಿ ಮರಳು ಗುತ್ತಿಗೆದಾರರಿಗೆ ಈಗಾಗಲೇ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ನೋಟೀಸ್ ಜಾರಿಗೊಳಿಸಿರುವಂತೆ ರಾಜಧನ, AAPP ಮತ್ತು ಡಿ.ಎಂ.ಎಫ್ ಮೊತ್ತಗಳನ್ನು ಗುತ್ತಿಗೆದಾರರು ನಿಯಮಾವಳಿಗಳಂತೆ ಪಾವತಿಸಬೇಕಿದ್ದು, ಮರಳು ಗುತ್ತಿಗೆದಾರರು ವಿನಾಯಿತಿ ನೀಡಲು ಕೋರಿರುವ ಮನವಿಯನ್ನು ಕೆ.ಎಂ.ಎಂ.ಸಿ.ಆರ್-1994 ರ 31-ಆರ್(21) ರನ್ವಯ ಪರಿಗಣಿಸಲು ಬರುವುದಿಲ್ಲವೆಂಬ ಅಭಿಪ್ರಾಯವನ್ನು ಸಲ್ಲಿಸಲಾಗಿರುತ್ತದೆಂದು ಹಿರಿಯ ಭೂವಿಜ್ಞಾನಿಯವರು ಸಭೆಯ ಗಮನಕ್ಕೆ ತಂದರು. ಈ ಸಂಬಂಧ ಜಿಲ್ಲಾಧಿಕಾರಿಗಳು ಮಾತನಾಡಿ ಸದರಿ ರಿಟ್ ಪಿಟಿಷನ್ ಪ್ರಕರಣವನ್ನು ಪರಿಶೀಲಿಸಿಕೊಂಡು ಸದರಿ ಪ್ರಕರಣದ ತೀರ್ಮಾನದಂತೆ ಹಾಗೂ ಉಪಸಮಿತಿಯ ವರದಿಯನ್ವಯ ಇನ್ನೊಮ್ಮೆ ಗುತ್ತಿಗೆದಾರರಿಗೆ <u>ಕಾರಣ ಕೇಳಿ ನೋಟೀಸ್/SHOW CAUSE NOTICE</u> ನೀಡಿ ನಿಯಮಾನುಸಾರ ಕ್ರಮವಹಿಸಲು ಹಿರಿಯ ಭೂವಿಜ್ಞಾನಿಯವರಿಗೆ ಸಭೆಯಲ್ಲಿ ಸೂಚಿಸಿದರು.

**3. ಮಳೆಗಾಲದ ಅವಧಿಯಲ್ಲಿ ಮರಳು ಬ್ಲಾಕ್‌ಗಳಲ್ಲಿ ಗಣಿಗಾರಿಕೆ/ಸಾಗಾಣಿಕೆಯನ್ನು ಸ್ಥಗಿತಗೊಳಿಸಲಾಗಿರುವ ಬಗ್ಗೆ ಚರ್ಚೆ:**

ಕೊಡಗು ಜಿಲ್ಲೆಯಲ್ಲಿ ಮಳೆಗಾಲದ ಅವಧಿಯಲ್ಲಿ ಅಧಿಕ ಪ್ರಮಾಣದಲ್ಲಿ ಮಳೆ ಬೀಳುವುದರಿಂದ ಮರಳು ಗಣಿಗಾರಿಕೆ/ಸಾಗಾಣಿಕೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿರುತ್ತದೆಂದು ಹಿರಿಯ ಭೂವಿಜ್ಞಾನಿಯವರು ಸಭೆಯ ಗಮನಕ್ಕೆ ತಂದರು. ಜಿಲ್ಲಾಧಿಕಾರಿಗಳು ಈ ಬಗ್ಗೆ ಮಾತನಾಡುತ್ತಾ ಕೆಲವು ಮರಳು ಗುತ್ತಿಗೆದಾರರು ಈಗಾಗಲೇ ಮರಳು ಗಣಿಗಾರಿಕೆ/ಸಾಗಾಣಿಕೆಗೆ ಅನುಮತಿ ನೀಡಲು ಮನವಿಗಳನ್ನು ಸಲ್ಲಿಸುತ್ತಿರುತ್ತಾರೆಂದು ಹಾಗೂ ಅನುಮತಿ ನೀಡುವ ಬಗ್ಗೆ ಹಿರಿಯ ಭೂವಿಜ್ಞಾನಿಯವರನ್ನು ಪ್ರಶ್ನಿಸಿದರು. ಇದಕ್ಕೆ ಹಿರಿಯ ಭೂವಿಜ್ಞಾನಿಯವರು ಈಗಾಗಲೇ ಎಲ್ಲಾ ಮರಳು ಬ್ಲಾಕ್‌ಗಳನ್ನು ಸ್ಥಳ ಪರಿಶೀಲನೆ ನಡೆಸಲಾಗಿದ್ದು, ಪ್ರಸ್ತುತ ಎಲ್ಲಾ ಮರಳು ಬ್ಲಾಕ್‌ಗಳಲ್ಲೂ ನೀರು ತುಂಬಿದ್ದು, ಗಣಿಗಾರಿಕೆಗೆ ಅನುಮತಿ ನೀಡಲು ಇನ್ನೂ ಸ್ವಲ್ಪ ದಿನಗಳ ಕಾಲಾವಕಾಶ ಬೇಕಾಗಿರುತ್ತದೆ. ಹಾಗೂ ಮರಳು ಬ್ಲಾಕ್‌ಗಳಲ್ಲಿ ನೀರು ಕಡಿಮೆಯಾದ ಕೂಡಲೇ ಗಣಿಗಾರಿಕೆ/ಸಾಗಾಣಿಕೆಗೆ ಅವಕಾಶ ನೀಡಬಹುದಾಗಿರುತ್ತದೆಂದು ಸಭೆಯ ಗಮನಕ್ಕೆ ತಂದರು. ನಂತರ ಮಾನ್ಯ ಜಿಲ್ಲಾಧಿಕಾರಿಗಳು ಸಭೆಯಲ್ಲಿದ್ದ ಇತರೆ ಅಧಿಕಾರಿಗಳೊಂದಿಗೆ ಚರ್ಚಿಸಿ ಮರಳು ಬ್ಲಾಕ್‌ಗಳಲ್ಲಿ ನೀರಿನ ಹರಿವು ಕಡಿಮೆಯಾದ ಕೂಡಲೇ ನಿಯಮಾನುಸಾರ ಪರಿಶೀಲಿಸಿಕೊಂಡು ಸದರಿ ಮರಳು ಗುತ್ತಿಗೆದಾರರುಗಳು ಮರಳು ಗಣಿಗಾರಿಕೆ/ಸಾಗಾಣಿಕೆ ಮಾರ್ಗಸೂಚಿಗಳಂತೆ ಕ್ರಮವಹಿಸಿದ್ದಲ್ಲಿ ನಿಯಮಾನುಸಾರ ಗಣಿಗಾರಿಕೆ/ಸಾಗಾಣಿಕೆಗೆ ಅವಕಾಶ ಕಲ್ಪಿಸುವಂತೆ ವಿಸ್ತೃತ ಚರ್ಚೆಯ ಬಳಿಕ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

4. ಮರಳು ಗಣಿ ಗುತ್ತಿಗೆದಾರರು/ಜಿ.ಪಿ.ಎಸ್ ಅಳವಡಿಸಿರುವ ವಾಹನಗಳು ಪರವಾನಿಗೆ ಉಲ್ಲಂಘನೆ ಮಾಡಿರುವ ಬಗ್ಗೆ ಚರ್ಚೆ.

ಕೊಡಗು ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ಮರಳು ಬ್ಲಾಕ್‌ಗಳಿಂದ ಮರಳು ಸಾಗಾಣಿಕೆ ಮಾಡುವ ವಾಹನಗಳು ಜಿಪಿಎಸ್ ನಿಯಮ ಉಲ್ಲಂಘನೆ ಮಾಡಿರುವ ಬಗ್ಗೆ ಜಿಪಿಎಸ್ ಸಂಸ್ಥೆಯವರಿಂದ ವರದಿಯನ್ನು ಪಡೆದು ಈಗಾಗಲೇ ಎಲ್ಲಾ ವಾಹನಗಳಿಗೆ ನೋಟೀಸ್ ಜಾರಿ ಮಾಡಲಾಗಿರುತ್ತದೆಂದು ಹಿರಿಯ ಭೂವಿಜ್ಞಾನಿಯವರು ಸಭೆಯ ಗಮನಕ್ಕೆ ತಂದರು. ಈ ಸಂಬಂಧ ಜಿಲ್ಲಾಧಿಕಾರಿಗಳು ಮಾತನಾಡಿ ಜಿಪಿಎಸ್ ಉಲ್ಲಂಘನೆ ಮಾಡಿರುವ ವಾಹನಗಳಿಗೆ ಈ ಹಿಂದೆ ಯಾವ ರೀತಿ ಕ್ರಮವಹಿಸಿರುತ್ತೀರಿ ಎಂಬುದಾಗಿ ಪ್ರಶ್ನಿಸಿದರು. ಇದಕ್ಕೆ ಹಿರಿಯ ಭೂವಿಜ್ಞಾನಿಯವರು ಜಿಪಿಎಸ್ ಪ್ರಕರಣದಲ್ಲಿ ವಿವಿಧ ರೀತಿಯ ಉಲ್ಲಂಘನೆಗಳಿದ್ದು, ಗಮ್ಯ ಸ್ಥಾನ ತಲುಪಿಲ್ಲದ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತಿದ್ದು, ಒಂದೇ ಪರವಾನಿಗೆಯಲ್ಲಿ 2 ಅಥವಾ 3 ಬಾರಿ ಮರಳು ಸಾಗಾಣಿಕೆ ಮಾಡುವುದು ಇನ್ನಿತರೆ ಉಲ್ಲಂಘನೆಗಳಿದ್ದು, ಇದರಲ್ಲಿ ಗಮ್ಯ ಸ್ಥಾನ ತಲುಪಿಲ್ಲದ ಎಲ್ಲಾ ವಾಹನಗಳಿಗೂ ಹಾಗೂ ಒಂದೇ ಪರವಾನಿಗೆಯಲ್ಲಿ 2 ಅಥವಾ 3 ಬಾರಿ ಮರಳು ಸಾಗಾಣಿಕೆ ಮಾಡಿರುವ ಪ್ರಕರಣಗಳಿಗೆ ಸೂಕ್ತ ಸಮಜಾಯಿಷಿ ನೀಡುವಂತೆ ಈಗಾಗಲೇ ನೋಟೀಸ್ ಜಾರಿಗೊಳಿಸಲಾಗಿರುತ್ತದೆ. ಆದರೆ ಯಾವ ಯಾವ ಪ್ರಕರಣಗಳಿಗೆ ಎಷ್ಟು ದಂಡ ಪಾವತಿಸಿಕೊಳ್ಳಬೇಕು ಎಂಬ ಬಗ್ಗೆ ನಿಖರವಾದ ಮಾಹಿತಿ ಇರುವುದಿಲ್ಲ. ಆದ್ದರಿಂದ ಸದರಿ ಸಭೆಯಲ್ಲಿ ಈ ಬಗ್ಗೆ ಚರ್ಚಿಸಬೇಕಾಗಿರುತ್ತದೆಂದು ಹಿರಿಯ ಭೂವಿಜ್ಞಾನಿಯವರು ಸಭೆಯ ಗಮನಕ್ಕೆ ತಂದರು.

ನಂತರ ಈ ಬಗ್ಗೆ ಮಾತನಾಡಿದ ಜಿಲ್ಲಾಧಿಕಾರಿಗಳು ಇತರೆ ಅಧಿಕಾರಿಗಳೊಂದಿಗೆ ವಿಸ್ತೃತವಾಗಿ ಚರ್ಚಿಸಿ ದಂಡ ಪಾವತಿಸಿಕೊಳ್ಳುವ ಬಗ್ಗೆ ಪರಿಶೀಲಿಸಿಕೊಂಡು ಮೊದಲನೆ ಹಾಗೂ ಎರಡನೇ ಬಾರಿಗೆ ದಂಡ ಪಾವತಿಸಿಕೊಳ್ಳಲು ನಂತರ ಸದರಿ ಉಲ್ಲಂಘನೆಯನ್ನು ಮುಂದುವರೆಸಿದ್ದಲ್ಲಿ ವಾಹನದ ವಿರುದ್ಧ ಮೋಟಾರು ವಾಹನ ಕಾಯ್ದೆಯಂತೆ ಕ್ರಮವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

5. ಶ್ರೀ ಕೆ.ಎ ರವಿಚಂಗಪ್ಪ, ಕಾವೇರಿ ಸೇನೆ ಇವರು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಪಿಟಿಷನ್ ಸಂ:11430/2012 ರಂತೆ ಪ್ರಕರಣ ದಾಖಲಿಸಿದ್ದು, ಮಾನ್ಯ ಉಚ್ಛ ನ್ಯಾಯಾಲಯ ಬೆಂಗಳೂರು ಇಲ್ಲಿಗೆ ದಿನಾಂಕ:24.11.2020 ರಂದು ವರದಿ ಸಲ್ಲಿಸಲಾಗಿರುತ್ತದೆ.

ಸದರಿಯವರು ಜಿಲ್ಲೆಯಾದ್ಯಂತ ಅನಧಿಕೃತ ಉಪಖನಿಜ ಗಣಿಗಾರಿಕೆ/ಸಾಗಾಣಿಕೆ/ದಾಸ್ತಾನು ಸಂಬಂಧ ನಿಯಮಾನುಸಾರ ಜಿಲ್ಲಾ ಟಾಸ್ಕ್‌ಫೋರ್ಸ್ ವತಿಯಿಂದ ಕ್ರಮವಹಿಸುತ್ತಿರುವ ಬಗ್ಗೆ 2012 ರಲ್ಲಿ ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಆಗಿಂದಾಗ್ಗೆ ಜಿಲ್ಲಾ ಟಾಸ್ಕ್‌ಫೋರ್ಸ್ ವತಿಯಿಂದ ಅನಧಿಕೃತ ಉಪಖನಿಜ ಗಣಿಗಾರಿಕೆ/ಸಾಗಾಣಿಕೆ/ದಾಸ್ತಾನು ಸಂಬಂಧ ಕ್ರಮವಹಿಸಿರುವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಬೇಕಾಗಿರುತ್ತದೆ. ಅದರಂತೆ ಈಗಾಗಲೇ ದಿನಾಂಕ:24.11.2020 ರಂದು ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆಂದು ಉಚ್ಛ ನ್ಯಾಯಾಲಯವು ಕೆ.ಎಂ.ಎಂ.ಸಿ.ಆರ್-1994 ರ ತಿದ್ದುಪಡಿ ನಿಯಮ 2017 ರಂತೆ ಕ್ರಮವಹಿಸಲು ದಿನಾಂಕ:24.08.2021 ರಲ್ಲಿ ಆದೇಶಿಸಿರುತ್ತಾರೆಂದು ಹಿರಿಯ ಭೂವಿಜ್ಞಾನಿಯವರು ಸಭೆಯ ಗಮನಕ್ಕೆ ತಂದರು.

ಜಿಲ್ಲಾಧಿಕಾರಿಗಳು ಈ ಬಗ್ಗೆ ಮಾತನಾಡಿ ಸದರಿ ಪ್ರಕರಣದ ಮೇರೆಗೆ ಹಾಗೂ ಕೆ.ಎಂ.ಎಂ.ಸಿ.ಆರ್-1994 31 (ಆರ್) ರಂತೆ ಜಿಲ್ಲಾ ಹಾಗೂ ತಾಲ್ಲೂಕು ಸಮಿತಿಯ ಅಧಿಕಾರಿ ಹಾಗೂ ಸಿಬ್ಬಂದಿಗಳು ನಿಯಮಾವಳಿಗಳಂತೆ ಅನಧಿಕೃತ ಉಪಖನಿಜ ಗಣಿಗಾರಿಕೆ/ಸಾಗಾಣಿಕೆ/ದಾಸ್ತಾನು ಸಂಬಂಧ ಕಟ್ಟುನಿಟ್ಟಿನ ಕ್ರಮವಹಿಸಿ ವರದಿ ನೀಡಲು ಸದರಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೂ ನಿರ್ದೇಶನ ನೀಡಿ ಯಾವುದೇ ನ್ಯೂನತೆಗಳಾಗದಂತೆ ನಿಯಮಾನುಸಾರ ಕ್ರಮವಹಿಸಿ ಪ್ರತಿ ಮಾಹೆ ಕ್ರೋಢೀಕೃತ ವರದಿ ಸಲ್ಲಿಸಲು ನಿರ್ದೇಶಿಸಿದರು.

6. ಬಲ್ಯಮಂಡೂರು ಮರಳು ಬ್ಲಾಕ್ ಸಂಬಂಧ ರಿಟ್ ಪಿಟಿಷನ್ ಸಂಖ್ಯೆ: 14975/2019 ರಂತೆ ಪ್ರಕರಣ ದಾಖಲಿಸಿರುವ ಬಗ್ಗೆ ಚರ್ಚೆ.

ಕೆ.ಎಂ.ಎಂ.ಸಿ.ಆರ್-1994 ರ ತಿದ್ದುಪಡಿ ನಿಯಮ 2016 ರಂತೆ ವಿರಾಜಪೇಟೆ ತಾಲ್ಲೂಕು ಬಲ್ಯಮಂಡೂರು ಗ್ರಾಮದ ಲಕ್ಷ್ಮಣ ತೀರ್ಥ ನದಿ ಪಾತ್ರದಲ್ಲಿ 9-00 ಎಕರೆ ಮರಳು ಬ್ಲಾಕ್‌ನ್ನು ಗುರುತಿಸಿ ಟೆಂಡರ್ ಕಂ ಹರಾಜು ಮೂಲಕ ವಿಲೇವಾರಿ ಮಾಡಿ ಶ್ರೀ ಹೆಚ್.ಬಿ ವಿಜಯ ಕುಮಾರ್ ಎಂಬುವವರು ಯಶಸ್ವಿ ಬಿಡ್ಡುದಾರರಾಗಿರುತ್ತಾರೆ. ಆದರೆ ಸದರಿ ಮರಳು ಬ್ಲಾಕ್‌ನಲ್ಲಿ ತೂಗು ಸೇತುವೆ ಇದ್ದು, ಸದರಿ ತೂಗು ಸೇತುವೆಯನ್ನು ಪರಿಗಣಿಸದೇ ನಿಯಮ ಉಲ್ಲಂಘಿಸಿರುತ್ತಾರೆಂದು ಸದರಿ ಮರಳು ಬ್ಲಾಕ್‌ನಲ್ಲಿ ಗಣಿಗಾರಿಕೆಗೆ ಅನುಮತಿ ನೀಡಬಾರದೆಂದು ಬಲ್ಯಮಂಡೂರು ಗ್ರಾಮದ ಶ್ರೀ ಪಿ.ಟಿ ಶಿವಪ್ಪ ಮತ್ತು ಶ್ರೀ ಪಿ.ಆರ್ ಸತೀಶ್ ಎಂಬುವವರು ಈ ಹಿಂದೆಯೇ ದೂರು ನೀಡಿದ್ದು, ಸದರಿ ಸೇತುವೆಯ ಎರಡು ಕಡೆಗಳಲ್ಲೂ 500 ಮೀಟರ್ ಅಂತರವನ್ನು ಬಿಟ್ಟು, 9-00 ಎಕರೆ ಪೈಕಿ 4-00 ಎಕರೆ ಪ್ರದೇಶದಲ್ಲಿ ಮಾತ್ರ ಗಣಿಗಾರಿಕೆಗೆ ಅನುಮತಿ ನೀಡಲು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಈಗಾಗಲೇ ಆದೇಶ ನೀಡಲಾಗಿದ್ದು, ಸದರಿ ಆದೇಶದ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:14975/2019 ರಲ್ಲಿ ಪ್ರಕರಣ ದಾಖಲಿಸಿದ್ದು, ಮಾನ್ಯ ಉಚ್ಛ ನ್ಯಾಯಾಲಯವು ಸದರಿ ಅರ್ಜಿದಾರರು ಪ್ರಸ್ತಾಪಿಸಿರುವ ವಿಷಯವು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಅಡಿಯಲ್ಲಿ ಪರಿಗಣಿಸಲು ಸಮರ್ಥನೀಯವಾಗಿರುವುದಿಲ್ಲವೆಂದು ವಿಲೇವಾರಿ ಮಾಡಲಾಗಿರುತ್ತದೆಂದು ದಿನಾಂಕ:11.01.2022 ರಂದು ಮಾನ್ಯ ಉಚ್ಛ ನ್ಯಾಯಾಲಯದ ಆದೇಶವನ್ನು ಹಿರಿಯ ಭೂವಿಜ್ಞಾನಿಯವರು ಸಭೆಯ ಗಮನಕ್ಕೆ ತಂದರು.

ವಿಸ್ತೃತ ಚರ್ಚೆಯ ಬಳಿಕ ಈಗಾಗಲೇ **ಹೊಸ ಮರಳು ನೀತಿ 2020 ದಿನಾಂಕ:21.05.2020** ರಂದು ಜಾರಿಯಾಗಿದ್ದು, ಸದರಿ ಮರಳು ಬ್ಲಾಕ್ VI ಶ್ರೇಣಿಯ ನದಿ ಪಾತ್ರಕ್ಕೆ ಬರುವ ಕಾರಣ ಮತ್ತೊಮ್ಮೆ ಜಂಟಿ ಸ್ಥಳ ಪರಿಶೀಲನೆ ಮಾಡಿ IV, V ಮತ್ತು VI ನೇ ಶ್ರೇಣಿಯಲ್ಲಿ ಲಭ್ಯವಿರುವ ಮರಳು ಬ್ಲಾಕ್‌ಗಳನ್ನು ಗುರುತಿಸಿ **ಕರ್ನಾಟಕ ಸ್ಟೇಟ್ ಮಿನರಲ್ ಕಾರ್ಪೋರೇಷನ್ ಲಿಮಿಟೆಡ್ (ಕೆ.ಎಸ್.ಎಂ.ಸಿ.ಎಲ್)** ಇವರಿಗೆ ವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

7. **ಹೊಸ ಮರಳು ನೀತಿ ಅನ್ವಯ 11 ಮರಳು ಬ್ಲಾಕ್‌ಗಳನ್ನು ಸರ್ಕಾರಿ ಕಾಮಗಾರಿಗಳಿಗೆ ಮೀಸಲಿಡುವ ಬಗ್ಗೆ ಚರ್ಚೆ.**

ಹೊಸ ಮರಳು ನೀತಿ 2020 ರಂತೆ IV, V ಮತ್ತು VI ಶ್ರೇಣಿಯಲ್ಲಿ ಲಭ್ಯವಿರುವ ಮರಳು ನಿಕ್ಷೇಪಗಳನ್ನು ಈ ಕೆಳಕಂಡಂತೆ ಗುರುತಿಸಲಾಗಿದ್ದು, ಸದರಿ ಬ್ಲಾಕ್‌ಗಳನ್ನು ಸರ್ಕಾರದಿಂದ ಅಧಿಸೂಚನೆ ಮೂಲಕ ನಿಗದಿ ಪಡಿಸಿದ ಸರ್ಕಾರಿ ಇಲಾಖೆ/ನಿಗಮ/ಮಂಡಳಿಗಳಿಗೆ ವಹಿಸಬಹುದಾಗಿರುತ್ತದೆಂದು ಹಿರಿಯ ಭೂವಿಜ್ಞಾನಿಯವರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಮಾತನಾಡಿದ ಜಿಲ್ಲಾಧಿಕಾರಿಗಳು ಸದರಿ ಬ್ಲಾಕ್‌ಗಳನ್ನು ಸರ್ಕಾರಿ ಕಾಮಗಾರಿ ನಿರ್ವಹಿಸುವ ಇಲಾಖೆಗಳು ವಹಿಸಿಕೊಳ್ಳುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಇತರೆ ಅಧಿಕಾರಿಗಳನ್ನು ಪ್ರಶ್ನಿಸಿದರು. ಯಾರು ಸಹ ಅವರವರ ಇಲಾಖೆಗಳಲ್ಲಿ ಹೆಚ್ಚು ಕೆಲಸ ಇರುವ ಕಾರಣ ವಹಿಸಿಕೊಳ್ಳಲು ಸಿದ್ಧರಿಲ್ಲವೆಂದು ಸಭೆಗೆ ತಿಳಿಸಿದರು. ಜಿಲ್ಲಾಧಿಕಾರಿಗಳು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ವಹಿಸಿಕೊಳ್ಳುವಂತೆ ಸೂಚಿಸಿದರು. ಆದರೆ ಸದರಿಯವರು ಸಹ ಈ ಹಿಂದೆಯೇ ನಮ್ಮ ಇಲಾಖೆಗೆ ಮರಳು ಬ್ಲಾಕ್‌ಗಳನ್ನು ವಹಿಸಲಾಗಿದ್ದು, ನಿರ್ವಹಿಸಲು ಕಷ್ಟವಾದ ಕಾರಣ ನಮ್ಮ ಇಲಾಖೆಯಿಂದ ಕೈಬಿಡಲಾಗಿರುತ್ತದೆಂದು ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮರಳಿನ ಅವಶ್ಯಕತೆ ಇದ್ದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಮರಳು ಬ್ಲಾಕ್‌ಗಳಿಂದಲೇ ಸರ್ಕಾರಿ ಕಾಮಗಾರಿಗೆ ಪ್ರಥಮ ಆದ್ಯತೆಯಾಗಿ ಮರಳನ್ನು ವಿತರಿಸಲು ಅವಕಾಶ ಕಲ್ಪಿಸುವಂತೆ ಸಭೆಯಲ್ಲಿ ಕೋರಿದರು. ಇದಕ್ಕೆ ಜಿಲ್ಲಾಧಿಕಾರಿಗಳು ಈಗಾಗಲೇ ನಿಗದಿ ಪಡಿಸಲಾಗಿರುವ ದರದಲ್ಲಿ ಸರ್ಕಾರಿ ಕಾಮಗಾರಿ ನಿರ್ವಹಿಸುವ ಇಲಾಖೆಗಳಿಗೆ ಆದ್ಯತೆ ಮೇರೆಗೆ ಮರಳು ವಿತರಿಸುವಂತೆ ಮರಳು ಗುತ್ತಿಗೆದಾರರಿಗೆ ಸೂಚಿಸಲು ಹಿರಿಯ ಭೂವಿಜ್ಞಾನಿಯವರಿಗೆ ನಿರ್ದೇಶನ ನೀಡಿದರು. ಮುಂದುವರೆದು

| ಕ್ರಸಂ | ತಾಲ್ಲೂಕು | ಬ್ಲಾಕ್‌ನ ಹೆಸರು | ಸರ್ವೆ ನಂ | ವಿಸ್ತೀರ್ಣ | ಪ್ರಮಾಣ (MT) |
|---|---|---|---|---|---|
| 1 | ಸೋಮವಾರಪೇಟೆ | ಮಲಗನಹಳ್ಳಿ ಬ್ಲಾಕ್-II | 31/1 | 12.00 | 4800 |
| 2 | ಮಡಿಕೇರಿ | ನಾಪೋಕ್ಲು | 42, 43, 44, 45, 152/1 & 137 | 5.20 | 2200 |
| 3 | ಸೋಮವಾರಪೇಟೆ | ಹೊಸಳ್ಳಿ | 39/1, 38, 40/2, 44, 49/1, 49/2, 50/1, 50/2, 51, 52, 53, 62 | 5.00 | 2000 |
| 4 | ವಿರಾಜಪೇಟೆ | ಹಾಲಗುಂದ | 1/3, 4, 5, 70, 71, 73/1, 3 | 6.30 | 2520 |
| 5 | ಕುಶಾಲನಗರ | ಗರಗಂದೂರು | 124, 107, 206, 171, 169, 168 | 8.0 | 3200 |
| 6 | ಪೊನ್ನಂಪೇಟೆ | ಕೊಟ್ಟಗೇರಿ | 24, 25, 25/1 | 7.00 | 2800 |
| 7 | ಕುಶಾಲನಗರ | ಶಿರಂಗಾಲ | 243, 245, 250 | 9.00 | 3600 |
| 8 | ಸೋಮವಾರಪೇಟೆ | ಜಂಬೂರು | 44, 45, 33/1 | 6.20 | 2500 |
| 9 | ಪೊನ್ನಂಪೇಟೆ | ಕೋತೂರು | 36/1, 74/1, 53/3 & 35 | 5.20 | 2120 |
| 10 | ಕುಶಾಲನಗರ | ನೆಲ್ಲಿಹುದಿಕೇರಿ-1 | 186, 179, 183, 180 | 7.20 | 2880 |
| 11 | ಮಡಿಕೇರಿ | ಬೇತು | 3, 18/1 | 6.20 | 2600 |
| | ಒಟ್ಟು | | | | **31220** |

ಈ ಎಲ್ಲಾ 11 ಮರಳು ಬ್ಲಾಕ್‌ಗಳನ್ನು ತಿದ್ದುಪಡಿ ನಿಯಮಾವಳಿಗಳನ್ವಯ ಕೆ.ಎಸ್.ಎಂ.ಸಿ.ಎಲ್ ರವರಿಗೆ ಕ್ರಮವಹಿಸಲು ವರದಿ ನೀಡುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

**8. ಹೊಸ ಮರಳು ನೀತಿ-2020 ರಂತೆ 1ನೇ, 2ನೇ ಮತ್ತು 3ನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ ಲಭ್ಯವಿರುವ ಮರಳು ನಿಕ್ಷೇಪಗಳನ್ನು ಗುರುತಿಸಿ ಸಂಬಂಧಿಸಿದ ಗ್ರಾಮ ಪಂಚಾಯತ್‌ಗಳಿಗೆ ವಹಿಸುವ ಬಗ್ಗೆ.**

ಹೊಸ ಮರಳು ನೀತಿ-2020 ರಂತೆ 1 ನೇ, 2 ನೇ ಮತ್ತು 3 ನೇ ಶ್ರೇಣಿಯ ಹಳ್ಳ/ತೊರೆಗಳಲ್ಲಿ ಲಭ್ಯವಿರುವ 08 ಮರಳು ನಿಕ್ಷೇಪಗಳನ್ನು ಈ ಕೆಳಕಂಡಂತೆ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜಂಟಿ ಸ್ಥಳ ಪರಿಶೀಲನಾ ವರದಿಗಳನ್ವಯ ಗುರುತಿಸಲಾಗಿದ್ದು, ಸದರಿ ಮರಳು ಬ್ಲಾಕ್‌ಗಳನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ವಹಿಸಬೇಕಾಗಿರುತ್ತದೆಂದು ಹಿರಿಯ ಭೂವಿಜ್ಞಾನಿಯವರು ಸಭೆಯ ಗಮನಕ್ಕೆ ತಂದರು.

| ಕ್ರಸಂ | ತಾಲ್ಲೂಕು | ಗ್ರಾಮ | ವಿಸ್ತೀರ್ಣ (ಎಕರೆಗಳಲ್ಲಿ) | ಅಂದಾಜು ಪ್ರಮಾಣ (ಮೆ.ಟನ್) |
|---|---|---|---|---|
| 01 | ಮಡಿಕೇರಿ | ನೇರೆಗುಂಡಿ ಬಲಮುರಿ | 4.90 | 600 |
| 02 | ಸೋಮವಾರಪೇಟೆ | ಬೆಂಬಳ್ಳೂರು (ಬಿಳಹ) | 3.00 | 700 |
| 03 | | ಮಾದ್ರೆ | 2.50 | 500 |
| 04 | ವಿರಾಜಪೇಟೆ | ಕದನೂರು | 1.30 | 350 |
| 05 | | ಹೆಮ್ಮಾಡು | 1.49 | 200 |
| 06 | | ಬೊಳ್ಳುಮಾಡು | 0.75 | 150 |
| 07 | ಪೊನ್ನಂಪೇಟೆ | ಬಿರುನಾಣಿ (ಹುದಿಕೇರಿ ) | 5.40 | 650 |
| 08 | | ಹೈಸೂಡ್ಲೂರು (ಹುದಿಕೇರಿ) | 2.75 | 400 |
| ಒಟ್ಟು | | | | 3550 |

ನಂತರ ಈ ಬಗ್ಗೆ ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಗ್ರಾಮ ಪಂಚಾಯಿತಿಯಿಂದ ನಿರ್ವಹಿಸುವ ಬಗ್ಗೆ ವಿವರಿಸಲು ಹಿರಿಯ ಭೂವಿಜ್ಞಾನಿಯವರಿಗೆ ಸೂಚಿಸಿದರು. ನಂತರ ಹಿರಿಯ ಭೂವಿಜ್ಞಾನಿಯವರು ಮೇಲ್ಕಂಡ ಮರಳು ಬ್ಲಾಕ್‌ಗಳ ಸಂಬಂಧ ತಾಲ್ಲೂಕು ಮರಳು ಸಮಿತಿಯಿಂದ ಶಿಫಾರಸ್ಸು ಪಡೆದು ಜಿಲ್ಲಾ ಮರಳು ಸಮಿತಿಯಲ್ಲಿ ಅನುಮೋದಿಸಿ ಸಂಬಂಧಿಸಿದ ಗ್ರಾಮ ಪಂಚಾಯಿತಿಗೆ ಉಪ ವಿಭಾಗಾಧಿಕಾರಿಗಳು ಹಾಗೂ ಅಧ್ಯಕ್ಷರು, ತಾಲ್ಲೂಕು ಮರಳು ಸಮಿತಿಯವರು ಕೆ.ಎಂ.ಎಂ.ಸಿ.ಆರ್-1994 ರ ತಿದ್ದುಪಡಿ ನಿಯಮಾವಳಿ 2021 31-ಟಿ (4) ರ ನಿಯಮಾನುಸಾರ ಕ್ರಮಕೈಗೊಳ್ಳಬೇಕಿರುತ್ತದೆ. ನಂತರ ಸದರಿ ಗ್ರಾಮ ಪಂಚಾಯಿತಿಯವರು ಸರ್ಕಾರ ನಿಗಧಿ ಪಡಿಸಿರುವ ಪ್ರತಿ ಮೆ.ಟನ್ ಮರಳಿಗೆ ಗರಿಷ್ಠ ರೂ.300/-ಗಳ ಮಾರಾಟ ದರವನ್ನು ನಿಗಧಿ ಪಡಿಸಲಾಗಿದ್ದು, ಅದರಂತೆ ಕ್ರಮವಹಿಸಬೇಕಾಗಿರುತ್ತದೆಂದು ಸಭೆಯ ಗಮನಕ್ಕೆ ತಂದರು. ನಂತರ ಮಾತನಾಡಿದ ಜಿಲ್ಲಾಧಿಕಾರಿಗಳು ಸದರಿ ಮರಳು ನಿಕ್ಷೇಪಗಳನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ವಹಿಸುವ ಸಂಬಂಧ ತುರ್ತಾಗಿ ಎಲ್ಲಾ ಅಧಿಕಾರಿಗಳು ಕ್ರಮವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಅನಧಿಕೃತ ಮರಳು ಗಣಿಗಾರಿಕೆಯಲ್ಲಿ ತೊಡಗಿದ್ದ ಯಾಂತ್ರಿಕ ದೋಣಿ ಹಾಗೂ ಇನ್ನಿತರೆ ಸಲಕರಣೆಗಳನ್ನು ನಿಯಮಾವಳಿಗಳಂತೆ ಯಾರು ದಂಡ ಪಾವತಿಸಲು ಬಾರದಿದ್ದರೆ ಹರಾಜು ಮಾಡಿ ನಿಯಮಾನುಸಾರ ಕ್ರಮವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

9. **ಜಿಪಿಎಸ್ ಸಂಸ್ಥೆಯವರಿಗೆ ಕಾರ್ಯಾದೇಶ ನೀಡುವ ಸಂಬಂಧ ಚರ್ಚೆ:**

ಜಿಪಿಎಸ್ ಸಂಸ್ಥೆಯವರಿಗೆ ಕಾರ್ಯಾದೇಶ ನೀಡುವ ಕಾರಣ ಕೇಂದ್ರ ಕಛೇರಿ ಸುತ್ತೋಲೆಗಳನ್ವಯ ಶೀಘ್ರದಲ್ಲಿಯೇ ಹೊಸ ನಿಯಮಾವಳಿಗಳನ್ನು ಮಾಡುತ್ತಿರುತ್ತಾರೆಂದು ಸಭೆಗೆ ತಿಳಿಸಿದರು. ಈ ಮಳೆಗಾಲದವರೆಗೂ ಈಗಿರುವ ಜಿಪಿಎಸ್ ಸಂಸ್ಥೆಯವರ ಸೇವೆಯನ್ನು ಮುಂದುವರೆಸಿ ಕೇಂದ್ರ ಕಛೇರಿಯಲ್ಲಿ OLA ಮಾದರಿ OTP/Central RFID ವಿಳಂಬವಿದ್ದರೆ ಮತ್ತೊಮ್ಮೆ ಮುಂದಿನ ವರ್ಷದಲ್ಲಿ ನೂತನವಾಗಿ ಜಿಪಿಎಸ್ ಸೇವಾದಾರರಿಗೆ ಟೆಂಡರ್ ಕರೆಯಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ನಂತರ ಅಧ್ಯಕ್ಷರ ಅಪ್ಪಣೆ ಮೇರೆಗೆ ಸಭೆಯನ್ನು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ವಂದಿಸಿ ಮುಕ್ತಾಯಗೊಳಿಸಲಾಯಿತು.

25.01.2022

CI 14-6 mmn 2022

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಮರಳು ಉಸ್ತುವಾರಿ ಸಮಿತಿ
ಕೊಡಗು ಜಿಲ್ಲೆ, ಮಡಿಕೇರಿ